ತಪ್ಪೋ ಅಂತ ತಿಳಿಯಲೇ ಇಲ್ಲ' ಅಂದು ಮಾತಾಡುವುದನ್ನು ನಿಲ್ಲಿಸಿದಳಾಕೆ.

ಈಗ ಕಾರು ನಾಗಾರ್ಜುನ ಸರ್ಕಲ್ ಹತ್ತಿರ ಬಂದಿತ್ತು. ಇನ್ನು ಅಪ್ ಏರಿದರೆ ನಮ್ಮ ಆಫೀಸು.

ಅದನ್ನು ನೋಡಿಯೇ ಆಕೆ ಇನ್ನೇನಾದರೂ ಮಾತಾಡುವಳೇನೋ ಎಂಬಂತೆ ನೋಡಿದೆ. ಇಲ್ಲ. ಬಿಗಿಯಾಗಿ ಹಿಡಿದುಕೊಂಡು ಗೇರು ಬದಲಿಸುತ್ತ ಹಿಂದೆ ಬರುತ್ತಿರುವವರಿಗೆ ಬ್ಲಿಂಕ್ ಕೊಡುತ್ತ ಕಾರನ್ನು ಸೈಡಿಗೆ ತೆಗೆದುಕೊಂಡು ನಮ್ಮ ಆಫೀಸಿನ ಮುಂದೆ ನಿಲ್ಲಿಸಿದಳು.

ಅಷ್ಟೊತ್ತಿಗೆ ಟೈರುಗಳು ಮುಳುಗುವಷ್ಟು ಮಳೆನೀರು ಹರಿಯುತ್ತಿದೆ ರಸ್ತೆ ಮೇಲೆ. ಕೊಡೆ ಹಿಡಿದು ಗೇಟು ಹತ್ತಿರ ನಿಂತಿದ್ದ ಸೆಕ್ಯುರಿಟಿ ಗಾರ್ಡು ಯಾರು ಎಂಬಂತೆ ಬಗ್ಗಿ ನೋಡಲು ಬಂದ ಹತ್ತಿರಕ್ಕೆ.

ಇನ್ನು ನಾನು ಇಳಿಯಬೇಕು. ಇಳಿದು ಗುಡ್‌ಬೈ ಹೇಳಬೇಕು.

ಆದರೆ ಇಷ್ಟು ಹೊತ್ತೂ ಎದುರು ನೋಡುತ್ತಿದ್ದ ಆ ಕೆಲಸವನ್ನು ಈಗ ಮಾಡಲಾಗುತ್ತಿಲ್ಲ. ಕಾಲುಗಳು ಕದಲುತ್ತಿಲ್ಲ. ಸಿಮೆಂಟ್ ಹಾಕಿದಂತೆ ಬಿಗಿದುಕೊಂಡಿವೆ. ಕಾರಣವೂ ಗೊತ್ತಾಗುತ್ತಿದೆ. ಕತೆ ಅರ್ಧಕ್ಕೆ ನಿಂತಿದೆ. ಅನಗತ್ಯವಾಗಿ ಆಕೆ ಅದನ್ನು ಪ್ರಾರಂಭಿಸಿ ನನಗೆ ತಿಳಿಯದಂತೆಯೇ ನನ್ನನ್ನು ಅದರಲ್ಲಿ ಸಿಕ್ಕಿಸಿಹಾಕಿದ್ದಾಳೆ. ಈಗ ಅದು ಮುಗಿಯುವವರೆಗೆ ನನಗೆ ಮನಃಶಾಂತಿ ಇಲ್ಲ. ಬಹುಶಃ ಮುಗಿಸುವವರೆಗೆ ಆಕೆಗೂ ಇರಲಿಕ್ಕಿಲ್ಲ.

ಇಬ್ಬರೂ ಮುಖ ಮುಖ ನೋಡಿಕೊಂಡೆವು.

'ನೀವು ನಮ್ಮನೆಗೆ ಬರಬಾರದಾ ನನ್ಜೊತೆ' ಅಂದಳಾಕೆ.

ನನ್ನ ಮನಸು ದ್ವಂದ್ವದಲ್ಲಿ ಸಿಲುಕಿತು.

'ಹೇಳ್ರೀ?'

'ಅಂದ್ರೆ ಏನಿಲ್ಲ ತುಂಬಾ ಲೇಟಾಗುತ್ತೇನೋ ಅಂತ.'

'ಎಷ್ಟು ಲೇಟಾದರೂ ಏನಂತೆ ಸ್ವಲ್ಪ ಹೊತ್ತು ಬಂದು ಹೋಗಿ. ಇವತ್ತೊಂದಿನ. ನಾಳೆಯಿಂದ ನಾನು ನಿಮ್ಮನ್ನು ಡಿಸ್ಟರ್ಬ್ ಮಾಡಲ್ಲ. ಬೇಕಾದರೆ ನಮ್ಮನೆಯಿಂದ ನೇರವಾಗಿ ಆಟೊ ತಗೊಂಡು ಹೋಗೀರಂತೆ. ಸರೀನಾ?'

'ಸರಿ.'

'ಅಬ್ಬಾ. ಮನೆ ಹತ್ತಿರ ಪ್ರಾಬ್ಲಂ ಏನೂ ಇಲ್ಲ ತಾನೆ?'

'ಅಯ್ಯೋ ಆ ಥರ ಏನಿಲ್ಲ.'

'ದೆನ್ ಜಸ್ಟ್ ಕಾಲ್ ಹರ್. ಸ್ವಲ್ಪ ಲೇಟಾಗಿ ಬರ್ತೀನಂತ ಹೇಳಿಬಿಡಿ' ಅಂದು ತನ್ನ ಮೊಬೈಲ್ ತೆಗೆದು ನನ್ನ ಕೈಗೆ ಕೊಟ್ಟಳು ಫೋನ್ ಮಾಡಲು.

ನಾನು ಆಲೋಚಿಸುತ್ತಾ ಮನೇಲಿ ಏನು ಹೇಳೋದು ಅಂತ ಪ್ಲ್ಯಾನ್ ಮಾಡಿಕೊಳ್ಳುತ್ತಿರಬೇಕಾದರೆ ಮತ್ತೆ ತಡೆದಳು.

'ಫೋನ್ ಮಾಡೋಕ್ಮುಂಚೆ ಒಂದು ನಿಮಿಷ. ಈಗ ನನಗೂ ನನ್ನ ಮಗನಿಗೂ ನಡೆಯುವ ಸಂಭಾಷಣೇನ ನೀವು ತಲೆಗೆ ಹಚ್ಚಿಕೊಳ್ಳಕೂಡದು.'

'ಅದೇನು?'

'ಅದಷ್ಟೇ. ಮಾಮೂಲಾಗಿದ್ದರೆ ನಿಮ್ಮನ್ನು ಕಾರಿಳಿದು ಒಂದು ನಿಮಿಷ ಹೊರಗೆ ವೇಯ್ಟ್ ಮಾಡಿ ಅಂತ ಹೇಳ್ತಿದ್ದೆ. ಮಳೆ ಬರ್ತಾ ಇದೆ. ಆದ್ದರಿಂದ ನಿಮ್ಮುಂದೆಯೇ ಮಾತಾಡದೆ ವಿಧಿಯಿಲ್ಲ. ಈಗ ಮಾತಾಡದಿದ್ದರೆ ಅವನು ದಾರಿಯಲ್ಲಾದ್ರೂ ಗಲಾಟೆ ಮಾಡ್ತಾನೆ. ಅದಕ್ಕೇ...'